ರಾಗ – ಸೌರಾಷ್ಟ್ರ ಆಟತಾಳ (ಕೇಶವನಾಮ ರೀತಿ)

ಕಾಶಿಯ ಹಾದಿಯಲ್ಲಿ ಕೇಶವನಿದ್ದಾನೆ – ರಾಮ ರಾಮ
ಕೇಶವನ ದಯದಿಂದ ಕಾಶಿಯಾತ್ರೆಯ ಕಂಡೆ – ರಾಮ ರಾಮ

ಬದರಿಕಾಶ್ರಮದಲ್ಲಿ ನಾರಾಯಣನಿದ್ದಾನೆ – ರಾಮ ರಾಮ
ಬದರಿಕಾಶ್ರಮ ಕಂಡೆ ನಾರಾಯಣನ ದಯದಿ – ರಾಮ ರಾಮ

ಪ್ರಯಾಗ ನದಿಯಲಿ ಮಾಧವನಿದ್ದಾನೆ – ರಾಮ ರಾಮ
ಪ್ರಯಾಗ ನದಿ ಮಿಂದೆ ಮಾಧವನ ದಯದಿ – ರಾಮ ರಾಮ

ಗೋಕುಲದಲಿ ಶ್ರೀಗೋವಿಂದನಿದ್ದಾನೆ – ರಾಮ ರಾಮ
ಗೋಕುಲವನು ಕಂಡೆ ಶ್ರೀಗೋವಿಂದನ ದಯದಿ – ರಾಮ ರಾಮ

ವಿಷ್ಣುತೀರ್ಥದಲ್ಲಿ ಶ್ರೀವಿಷ್ಣುವಿದ್ದಾನೆ – ರಾಮ ರಾಮ
ವಿಷ್ಣುತೀರ್ಥದಿ ಮಿಂದೆ ವಿಷ್ಣುವಿನ ದಯದಿಂದ – ರಾಮ ರಾಮ

ಮತ್ಸ್ಯತೀರ್ಥದಲ್ಲಿ ಮಧುಸೂಧನನಿದ್ದಾನೆ – ರಾಮ ರಾಮ
ಮತ್ಸ್ಯತೀರ್ಥ ಮಿಂದೆ ಮಧುಸೂಧನನ ದಯದಿ– ರಾಮ ರಾಮ

ತ್ರಿವೇಣಿಯಲ್ಲಿ ತ್ರಿವಿಕ್ರಮನಿದ್ದಾನೆ – ರಾಮ ರಾಮ
ತ್ರಿವಿಕ್ರಮನ ದಯದಿ ತ್ರಿವೇಣಿಯಲ್ಲಿ ಮಿಂದೆ – ರಾಮ ರಾಮ

ವಾಮನ ನಮ್ಮನು ಒಲಿದು ಕಾಯುವನಂತೆ – ರಾಮ ರಾಮ
ವಾಮನನ ದಯದಿ ಭೂವೈಕುಂಠವ ಕಂಡೆ – ರಾಮ ರಾಮ

ಶ್ರೀಧರ ನಮ್ಮ ಹೃದಯದಲ್ಲಿದ್ದಾನೆ – ರಾಮ ರಾಮ
ಶ್ರೀಧರನ ದಯದಿಂದ ಹೃದಯವಾಸನ ಕಂಡೆ – ರಾಮ ರಾಮ

ಋಷಿಗಳಾಶ್ರಯದಲ್ಲಿ ಹೃಷೀಕೇಶನಿದ್ದಾನೆ – ರಾಮ ರಾಮ
ಹೃಷೀಕೇಶನ ದಯದಿ ಋಷಿಗಳಾಶ್ರಮ ಕಂಡೆ – ರಾಮ ರಾಮ

ಪದ್ಮನಾಭದಲ್ಲಿ ಪದ್ಮನಾಭನಿದ್ದಾನೆ – ರಾಮ ರಾಮ
ಪದ್ಮನಾಭನ ದಯದಿ ಪದ್ಮನಾಭವ ಕಂಡೆ – ರಾಮ ರಾಮ

ಸಾಧುಬೃಂದದಲ್ಲಿ ದಾಮೋದರನಿದ್ದಾನೆ – ರಾಮ ರಾಮ
ಸಾಧುಬೃಂದವ ಕಂಡೆ ದಾಮೋದರನ ದಯದಿ – ರಾಮ ರಾಮ

ಸಕಲತೀರ್ಥದಲ್ಲಿ ಸಂಕರ್ಷಣನಿದ್ದಾನೆ – ರಾಮ ರಾಮ
ಸಂಕರ್ಷಣನ ದಯದಿ ಸಕಲತೀರ್ಥದಿ ಮಿಂದೆ – ರಾಮ ರಾಮ

ವಸುಧೆಯ ಮೇಲೆಲ್ಲ ವಾಸುದೇವನಿದ್ದಾನೆ – ರಾಮ ರಾಮ
ವಾಸುದೇವನ ದಯದಿ ವಸುಧೆಯೆಲ್ಲವ ಕಂಡೆ – ರಾಮ ರಾಮ

ವೃದ್ದಗಂಗೆಯಲ್ಲಿ ಪ್ರದ್ಯುಮ್ನನಿದ್ದಾನೆ – ರಾಮ ರಾಮ
ಪ್ರದ್ಯುಮ್ನನ ದಯದಿ ವೃದ್ದಗಂಗೆಯ ಕಂಡೆ – ರಾಮ ರಾಮ

ಅಲಕನಂದನೆಯಲ್ಲಿ ಅನಿರುದ್ಧನಿದ್ದಾನೆ – ರಾಮ ರಾಮ
ಅಲಕನಂದನೆ ಮಿಂದೆ ಅನಿರುದ್ಧನ ದಯದಿ – ರಾಮ ರಾಮ

ಪುಣ್ಯಕ್ಷೇತ್ರದಲ್ಲಿ ಪುರುಷೋತ್ತಮನಿದ್ದಾನೆ – ರಾಮ ರಾಮ
ಪುಣ್ಯಕ್ಷೇತ್ರವ ಕಂಡೆ ಪುರುಷೋತ್ತಮನ ದಯದಿ – ರಾಮ ರಾಮ

ವೈತರಣಿಯಲ್ಲಿ ಅಧೋಕ್ಷಜನಿದ್ದಾನೆ – ರಾಮ ರಾಮ
ವೈತರಣಿ ದಾಟಿದೆ ಅಧೋಕ್ಷಜನ ದಯದಿ – ರಾಮ ರಾಮ

ನಿರ್ಮಲಗಂಗೇಲಿ ನರಸಿಂಹನಿದ್ದಾನೆ – ರಾಮ ರಾಮ
ನಿರ್ಮಲ ಗಂಗೆಯ ಮಿಂದೆ ನರಸಿಂಹನ ದಯದಿ – ರಾಮ ರಾಮ

ವೈಕುಂಠಗಿರಿಯಲಿ ಅಚ್ಯುತನಿದ್ದಾನೆ – ರಾಮ ರಾಮ
ವೈಕುಂಠಗಿರಿ ಕಂಡೆ ಅಚ್ಯುತನ ದಯದಿ – ರಾಮ ರಾಮ

ಜಾಹ್ನವಿಯಲ್ಲಿ ಜನಾರ್ದನನಿದ್ದಾನೆ – ರಾಮ ರಾಮ
ಜನಾರ್ದನನ ದಯದಿ ಜಾಹ್ನವಿಯಲಿ ಮಿಂದೆ – ರಾಮ ರಾಮ

ಉಡುಪಿ ಕ್ಷೇತ್ರದಲಿ ಉಪೇಂದ್ರನಿದ್ದಾನೆ – ರಾಮ ರಾಮ
ಉಡುಪಿ ಕ್ಷೇತ್ರವ ಕಂಡೆ ಉಪೇಂದ್ರನ ದಯದಿ – ರಾಮ ರಾಮ

ಹರಿಯುವ ನದಿಯಲ್ಲಿ ಶ್ರೀಹರಿಯಿದ್ದಾನೆ – ರಾಮ ರಾಮ
ಹರಿಯ ದಯದಿಂದ ಹರಿವ ನದಿಯ ಮಿಂದೆ – ರಾಮ ರಾಮ

ಕೃಷ್ಣಾಯೆಂದರೆ ಕಷ್ಟವು ಪರಿಹಾರ – ರಾಮ ರಾಮ
ಕೃಷ್ಣನ ದಯದಿ ಸಕಲ ಕಷ್ಟ ಬಿಟ್ಟಿತು – ರಾಮ ರಾಮ

ಭಕ್ತಿಯಲಿಪ್ಪತ್ನಾಲ್ಕು ನಾಮ ಪೇಳುವರಿಗೆ – ರಾಮ ರಾಮ
ಭುಕ್ತಿ ಮುಕ್ತಿಯನೀವ ವಿಜಯವಿಠಲರೇಯ – ರಾಮ ರಾಮ